

# ಬೃಹತ್ ಸುರುಳಿ ಗೋಪುರ



ವಿಚಿತ್ರ ರೀತಿಯಿಂದ ಸುರುಳಿಯಾಗಿ ಸುತ್ತುವ ಮೆಟ್ಟಿಲುಗಳ ಮೂಲಕ ಮೇಲೇರುವ ಒಂದು ಅನನ್ಯ ವೀಕ್ಷಣಾ ಗೋಪುರವಿರುವುದು ಲಂಡನ್‌ನ ಸ್ಟ್ರಾಟ್‌ಬೋರ್ಡ್‌ನ ರಾಣಿ ಎಲಿಜಬೆತ್ ಉದ್ಯಾನದಲ್ಲಿ. ಇಲ್ಲಿಗೆ ಹೆಚ್ಚು ಪ್ರವಾಸಿಗರನ್ನು ಸೆಳೆಯುವ ಏಕೈಕ ಉದ್ದೇಶದಿಂದ ಹೊಸದಾಗಿ ಏನಾದರೂ ಮಾಡಬೇಕೆಂದೇ ಇದನ್ನು ಕಟ್ಟಲಾಗಿದೆ.

ಆರ್ಸಲರ್ ಮಿತ್ತಲ್ ಅರ್ಬಟ್ ಎಂಬ ಹೆಸರಿರುವ ಗೋಪುರದ ತಯಾರಿಕೆಗೆ ಹೆಚ್ಚು ಹಣ ಹೂಡಿದವರು ಭಾರತದ ಮಿತ್ತಲ್ ಗ್ರೂಪಿನವರು. 114.5 ಮೀಟರ್ ಎತ್ತರವಿರುವ ಈ ಗೋಪುರವನ್ನು ಮೀರಿಸಿದ ಕಟ್ಟಡ ಆ ನಗರದಲ್ಲಿ ಇಲ್ಲ. ಟರ್ನರ್ ಪ್ರಶಸ್ತಿ ವಿಜೇತ ಅನೀಶಕುಮಾರ್ ಇದರ ವಿನ್ಯಾಸ ಮಾಡಿದರು. 19.1 ದಶಲಕ್ಷ ಪೌಂಡ್ ವೆಚ್ಚದಲ್ಲಿ ಸೃಷ್ಟಿಯಾಗಿರುವ ಗೋಪುರ 2014ರಿಂದ ವರ್ಷಕ್ಕೆ ಮೂರೂವರೆ ಲಕ್ಷ ವೀಕ್ಷಕರನ್ನು ಬರಮಾಡಿಕೊಳ್ಳುತ್ತಿದೆ.

■ ಪ. ರಾಮಕೃಷ್ಣ ಶಾಸ್ತ್ರಿ